ಈ ಲೇಖನದ ವಿಷಯಾನುಕ್ರಮಣಿಕೆ

ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಹದಿನಾಲ್ಕನೆಯ ಪದ್ಯ 2

ನೀಲವರ್ಣ 2

ವಿಶಾಲ 2

ಶುಭಗುಣಶೀಲ 3

ಮುನಿಕುಲಪಾಲ 3

ಲಕ್ಷ್ಮೀಲೋಲ 4

ರಿಪುಶಿಶುಪಾಲಮಸ್ತಕಶೂಲ 4

ವನಮಾಲ 5

ಮೂಲಕಾರಣ 5

ವಿಮಲ 6

ಯಾದವಜಾಲಹಿತ 7

ಗೋಪಾಲ 7

ಅಗಣಿತಲೀಲ 8

ಕೋಮಲಕಾಯ 8

## ವಿಶ್ವನಂದಿನಿ ಲೇಖನಮಾಲೆ — 45

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಹದಿನಾಲ್ಕನೆಯ ಪದ್ಯ

**ನೀಲವರ್ಣ ವಿಶಾಲ ಶುಭಗುಣ-**
**ಶೀಲ ಮುನಿಕುಲಪಾಲ ಲಕ್ಷ್ಮೀ-**
**ಲೋಲ ರಿಪುಶಿಶುಪಾಲಮಸ್ತಕಶೂಲ ವನಮಾಲ ।**
**ಮೂಲಕಾರಣ ವಿಮಲ ಯಾದವ-**
**ಜಾಲಹಿತ ಗೋಪಾಲ ಅಗಣಿತ-**
**ಲೀಲ ಕೋಮಲಕಾಯ ರಕ್ಷಿಸು ನಮ್ಮನನವರತ ॥ ೧೪ ॥**

### ನೀಲವರ್ಣ

ಕಡುಗಪ್ಪುಬಣ್ಣದವನು.

### ವಿಶಾಲ

ವಿಸ್ತೃತನಾದವನು. ಎಣಿಸಲಿಕ್ಕಾಗದ ಅನಂತಗುಣಗಳನ್ನು ಹೊಂದದ್ದಕ್ಕಾಗಿ ಗುಣಗಳಿಂದಲೂ ವಿಶಾಲನಾದವನು.

ಅವ್ಯಾಕೃತಾಕಾಶವನ್ನೂ ವ್ಯಾಪಿಸಿ ನಿಂತಿರುವದರಿಂದ ಆಕೃತಿಯಿಂದಲೂ ವಿಶಾಲನಾದವನು. ಕಾಲದ ಎಲ್ಲೆಯನ್ನು ಮೀರಿರುವದರಿಂದ ವಯಸ್ಸಿನಿಂದಲೂ ವಿಶಾಲನಾದವನು.

## ಶುಭಗುಣಶೀಲ

ಸತ್ವ ರಜಸ್ಸು ತಮಸ್ಸು ಎಂಬ ಪ್ರಾಕೃತವಾದ ಆ ಕಾರಣಕ್ಕಾಗಿಯೇ ಅಶುಭವಾದ ಗುಣಗಳಿಂದ ರಹಿತನಾಗಿ ಪರಮಶುಭವಾದ ಜ್ಞಾನ ಆನಂದಾದಿ ಅನಂತಗುಣಗಳನ್ನು ಹೊಂದಿರುವವನು.

## ಮುನಿಕುಲಪಾಲ

ಸರ್ವಸಂಗಪರಿತ್ಯಾಗವನ್ನೂ ಮಾಡಿ ವೈಷ್ಣವೋತ್ತಮರ ಸಹವಾಸದಲ್ಲದ್ದು ತಪಸ್ಸನ್ನು ಮಾಡುವ ಋಷಿಕುಲವನ್ನು ರಕ್ಷಿಸುವವನು. ರಾಮಾವತಾರದಲ್ಲಿ ಖರ ದೂಷಣ ಮಾರೀಚ ರಾವಣರನ್ನು ಕೊಂದು ದಂಡಕಾರಣ್ಯದ ಋಷಿಗಳನ್ನು ಪಾಲಿಸಿದವನು. ಕೃಷ್ಣಾವತಾರದಲ್ಲಿ

ನರಕಾಸುರರನನ್ನು ಕೊಂದು ಋಷಿಸಂಕುಲವನ್ನು ಪೊರೆದವನು.

## ಲಕ್ಷ್ಮೀಲೋಲ

ಲೋಲ ಎಂದರೆ ಆಸೆಯುಳ್ಳವನು **"ಲೋಲಶ್ಚಲೇ ಚ ಸತೃಷ್ಣೇ ಚ"** ಸ್ವರಮಣನಾದರೂ, ನಿತ್ಯತೃಪ್ತನಾದರೂ ಭಗವಂತ ಲಕ್ಷ್ಮೀದೇವಿಯ ಭಕ್ತಿಗೆ ಮೆಚ್ಚಿ ಅವಳಲ್ಲಿ ಅನುರಕ್ತನಾದವನು. ಅವಳ ಕುಡಿಗಣ್ಣ ನೋಟಕ್ಕೆ ಕಾದು ನಿಂತವನಂತೆ ನಿಂತು ಅವಳನ್ನು ಸಂತೋಷಪಡಿಸುವವನು.

## ರಿಪುಶಿಶುಪಾಲಮಸ್ತಕಶೂಲ

ಹಿರಣ್ಯಕಶಿಪುವಿನ ಆವೇಶವನ್ನು ಹೊತ್ತು ಶಿಶುಪಾಲ ಎಂಬ ಹೆಸರಿನಿಂದ ಹುಟ್ಟಿದ್ದ ಜಯ ರಾಜಸೂಯದ ಅಗ್ರಪೂಜೆಯ ಸಂದರ್ಭದಲ್ಲಿ ಪೂರ್ಣವಾದ ಅಸುರಾವೇಶದಿಂದ ದ್ವೇಷ ಮಾಡುತ್ತಾನೆ. ಸಭಾಮಧ್ಯದಲ್ಲಿಯೇ ಕೃಷ್ಣನನ್ನು ಯುದ್ಧಕ್ಕಾಗಿ ಅಹ್ವಾನಿಸಿದಾಗ ಪರಮಾತ್ಮ ತನ್ನ ಚಕ್ರವನ್ನು ಪ್ರಯೋಗ ಮಾಡಿ ಅವನನ್ನು ಕೊಲ್ಲುತ್ತಾನೆ. ಹೀಗೆ

ಅವನ ಮಸ್ತಕವನ್ನು ಉರುಳಿಸಿ ಅವನ ಪ್ರಾಣಕ್ಕೆ ತಾನೇ ಶೂಲಪ್ರಾಯನಾಗುತ್ತಾನೆ.

## ವನಮಾಲ

ಮಹಾಲಕ್ಷ್ಮೀದೇವಿ ವಿವಿಧ ವಿವಿಧ ಪರಿಮಳಭರಿತ ಹೂಗಳ ರೂಪವನ್ನು ಕೊಂಡು ಪರಮಾತ್ಮನಿಗೆ ಹಾರವಾಗಿ ಸೇವೆ ಸಲ್ಲಿಸಲು ಮುಂದಾಗುತ್ತಾಳೆ. ಪರಮಾತ್ಮನ ಆ ರಮಾತ್ಮಕವಾದ ಹಾರವನ್ನು ಧರಿಸಿ ವನಮಾಲ ಎಂದು ಕರೆಸಿಕೊಳ್ಳುತ್ತಾನೆ.

## ಮೂಲಕಾರಣ

ವಿಶ್ವದ ಸೃಷ್ಟಿಗೆ ಮೂಲ ಕಾರಣನಾದವನು. ಪರಮಾತ್ಮನಿಂದಲೇ ಸಮಗ್ರ ಜಗತ್ತು ಸೃಷ್ಟಿಯಾಯಿತು ಆದ್ದರಿಂದ ಅವನು ಮೂಲಕಾರಣ.

## ವಿಮಲ

ಹಾಗಂತ ಪರಮಾತ್ಮ ಈ ಜಗತ್ತಿಗೆ ಉಪಾದಾನಕಾರಣನಲ್ಲ, ಅರ್ಥಾತ್ ಮಡಿಕೆಗೆ ಮಣ್ಣು ಕಾರಣವಾದಂತೆ, ಮಣ್ಣೇ ಮಡಿಕೆಯಾಗಿ ಪರಿವರ್ತನೆಯಾಗುವಂತೆ ಪರಮಾತ್ಮನೇ ಜಗತ್ತಾಗಿ ಪರಿವರ್ತನೆಗೊಳ್ಳುವದಿಲ್ಲ. ಏಕೆಂದರೆ ಅವನು ವಿಮಲ. ಅವನಲ್ಲಿ ಯಾವ ರೀತಿಯ ದೋಷವೂ ಇಲ್ಲ. ನಿರ್ದೋಷನಾದ ಭಗವಂತ ಸಾವಿರಾರು ದೋಷಗಳಿಂದ ದುಷ್ಟವಾದ ಜಗತ್ತಾಗಿ ಹೇಗೆ ಪರಿಣಾಮಗೊಳ್ಳಲು ಸಾಧ್ಯವೇ ? ಸಾಧ್ಯವಿಲ್ಲ. ಹೀಗಾಗಿ ಅವನು ಮೂಲಕಾರಣನಾದರೂ, ವಿಮಲನಾಗಿ ಮೂಲಕಾರಣ. ಕುಂಬಾರ ಮಣ್ಣಿನಿಂದ ಮಡಿಕೆಯನ್ನು ತಯಾರಿಸುವಂತೆ ಪ್ರಕೃತಿಯಿಂದ ಜಗತ್ತನನ್ನು ಸೃಷ್ಟಿಮಾಡುವ ಮಹಾಕುಂಬಾರ ಭಗವಂತ, ಹೊರತು ಅವನು ಉಪಾದಾನಕಾರಣನಲ್ಲ. **"ಕರೋತಿ ಪಿತೃವದ್ ವಿಶ್ವಂ ಪೂರ್ಣಾಶೇಷಗುಣಾತ್ಮಕಃ"**

## ಯಾದವಜಾಲಹಿತ

ಜಾಲ ಎಂದರೆ ಗುಂಪು. ಯಾದವರೆಂಬ ಭಾಗವತೋತ್ತಮರ ಗುಂಪಿಗೆ ಸದಾ ಹಿತನಾದವನು. ಅವರ ಹಿತವನ್ನು ಎಂದೆದಿಗೂ ಕಾಯ್ದವನು. ತನಗೆ ಕಿರುಕುಳ ನೀಡಲು ಸಾಧ್ಯವಾಗದ್ದಕ್ಕೆ ಯಾದವರಿಗೆ ಜರಾಸಂಧ ಕಿರುಕುಳ ನೀಡಲು ಮುಂದಾದಾಗ ಮಥುರೆಯಿಂದ ದ್ವಾರಕೆಗೆ ಅವರನ್ನು ಕರೆದುಕೊಂಡು ಬಂದು ಬಂಗಾರದ ಮನೆಗಳನ್ನು ಅವರಿಗೆ ಕಟ್ಟಿಸಿಕೊಟ್ಟು ಅತುಲ ಐಶ್ವರ್ಯವನ್ನು ಅವರಿಗೆ ನೀಡಿ ಅವರ ಹಿತವನ್ನು ಕಾಯ್ದವನು.

## ಗೋಪಾಲ

ಅನಂತೈಶ್ವರ್ಯಸಂಪನ್ನನಾದರೂ ಗೋವಳರ ಮಧ್ಯದಲ್ಲಿ ಅವತರಿಸಿ ಗೋವುಗಳನ್ನು ಕಾದವನು, ದನಗಾಹಿಯಾಗಿ ಗೋವುಗಳನ್ನು ಮೇಯಿಸಿದವನು.

## ಅಗಣಿತಲೀಲ

ಸಕಲ ಚೇತನಪ್ರಪಂಚಕ್ಕೂ ತಿಳಿಯಲಾರದಷ್ಟು ಕೃತಿಗಳು ಶ್ರೀಹರಿಯಲ್ಲಿವೆ. ಸಾವರಣ ಬ್ರಹ್ಮಾಂಡದ ಸೃಷ್ಟಿಯಿಂದಾರಂಭಿಸಿ ಸಮಸ್ತರ ರಕ್ಷಣೆಯವರೆಗಿನ ಸಕಲ ಕ್ರಿಯೆಗಳನ್ನೂ, ಅನಾಯಾಸವಾಗಿಯೇ ಮಾಡುತ್ತಾನೆ ಎನ್ನುವದನ್ನು ಸೂಚಿಸಲು ದಾಸರು ಇಲ್ಲಿ ಲೀಲೆ ಎಂಬ ಪದವನ್ನು ಬಳಸುತ್ತಾರೆ. ಅಗಣಿತಕ್ರಿಯೆಗಳುಳ್ಳವನು ಎಂದರ್ಥ.

## ಕೋಮಲಕಾಯ

ಹೀಗೆ ಗೋಪಾಲನಾಗಿ, ಗೋವಿಂದನಾಗಿ, ಗೋಪೀಜನವಲ್ಲಭನಾಗಿ, ಕಂಸಾದಿಮಹಾದಾನವಪ್ರಾಣಹರಣನಾಗಿ, ಪಾಂಡವಪ್ರಿಯನಾಗಿ, ಮುನಿಕಲರಕ್ಷಕನಾಗಿ, ಗೀತಾಚಾರ್ಯನಾಗಿ, ಕುರುಕುಲಕೆ ಲಯವಿತ್ತ ಮಹಾಸಾಮರ್ಥ್ಯದವನಾಗಿ, ರುಕ್ಮಿಣ್ಯಾದಿ ಷಣ್ಮಹಿಷಿಯರ ವಲ್ಲಭನಾಗಿ, ಹದಿನಾರುಸಾವಿರಸ್ತ್ರೀಯರ ಮನದರಸನಾಗಿ,

ಬಲರಾಮ ಪ್ರದ್ಯುಮ್ನ ಉದ್ಧವ ಸಾತ್ಯಕಿ ಮುಂತಾದ ಭಾಗವತರ ಅರಸನಾಗಿ, ಹರಿದಾಸರ ಪ್ರಭುವಾಗಿ ಎಣಿಸಲಾಗದ ಅನಂತ ಲೀಲೆಗಳನ್ನು ತೋರಿದ ಅಗಣಿತಲೀಲ! ಪರಮಸುಂದರವಿಗ್ರಹನಾದ ಕೋಮಲಕಾಯ ! ನಮ್ಮನ್ನು ಅನವರತ ರಕ್ಷಿಸು ॥ ೧೪ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491